ನಿಪ್ಪಾಣಿ ಟೌನ್‌ನಲ್ಲಿರುವ ಪೋಲೀಸ್ ಠಾಣೆಗಳು

೧೯೫೩. ಶ್ರೀ ವೀರಕುಮಾರ್ ಎ. ಪಾಟೀಲ್ (ನಿಪ್ಪಾಣಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಿಪ್ಪಾಣಿ ಟೌನ್‌ನಲ್ಲಿರುವ ಒಟ್ಟು ಪೋಲೀಸ್ ಠಾಣೆಗಳು ಎಷ್ಟು, ಹಾಗು ಪ್ರತಿ ಪೋಲೀಸ್ ಠಾಣೆಯ ಸಿಬ್ಬಂದಿ ಬಲವೆಷ್ಟು? (ಪ್ರತಿ ಠಾಣೆಯಲ್ಲಿರುವ ಪುರುಷ ಹಾಗು ಮಹಿಳಾ ಕಾನ್ಸ್‌ಟೇಬಲ್‌ಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಒದಗಿಸುವುದು)

ಆ) ಪೋಲೀಸ್ ಸಿಬ್ಬಂದಿಯು ಆ ಟೌನಿನ ಜನಸಂಖ್ಯೆಗೆ ಅನುಗುಣವಾಗಿದೆಯೇ,

ಇ) ಈ ನಗರದಲ್ಲಿರುವ ಪೋಲೀಸ್ ಸಿಬ್ಬಂದಿಗೆ ಸರ್ಕಾರವು ವಸತಿ ಗೃಹಗಳನ್ನು ಒದಗಿಸಿದೆಯೆ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಪೋಲೀಸ್ ಠಾಣೆಗಳು : ೨

ಸಿಬ್ಬಂದಿ ವಿವರ ಕೆಳಕಂಡಂತಿದೆ.

	ಪಿಎಸ್‌ಐ	ಎಎಸ್‌ಐ	ಹೆಚ್‌ಸಿ	ಪಿಸಿ
೧) ನಿಪ್ಪಾಣಿ ಟೌನ್ ಪೋಲೀಸ್ ಠಾಣೆ				
ಪುರುಷರು	೧	—	೫	೨೦
ಮಹಿಳಾ ಪೋಲೀಸ್		ಇಲ್ಲ		
೨) ಬಸವೇಶ್ವರ ಚೌಕ ಪೋಲೀಸ್ ಠಾಣೆ				
ಪುರುಷರು	೨	೨	೭	೩೧
ಮಹಿಳಾ ಪೋಲೀಸ್	—	—	೧	೪
ಒಟ್ಟು	೩	೨	೧೩	೫೫

ಆ) ಇದೆ.

ಇ) ೧೭ ಪೋಲೀಸ್ ಸಿಬ್ಬಂದಿಗೆ ವಸತಿ ಗೃಹ ಒದಗಿಸಲಾಗಿದೆ.

ಶ್ರೀ ವೀರಣ್ಣ —ಮಾನ್ಯ ಅಧ್ಯಕ್ಷರೇ, ಪೋಲೀಸಿನವರಿಗೆ ವಸತಿ ಸೌಕರ್ಯವನ್ನು ಒದಗಿಸಿ ಕೊಡುವ ಉದ್ದೇಶದಿಂದ ಸರ್ಕಾರ ಈ ಕಾರ್ಯಕ್ರಮವನ್ನು ಈ ಯೋಜನೆ ಅಡಿಯಲ್ಲಿ ಈ ವರ್ಷ ಜಾರಿಗೆ ತಂದಿದೆ. ಈ ಕೇಸನ್ನು ಹಂತ ಹಂತವಾಗಿ ಮಾಡಲಾಗುವುದು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಮಿಕ ಸಂಘದ ಚುನಾವಣೆ ಬಗ್ಗೆ

೧೫೫೩. ಶ್ರೀ ಬಾಬುರೆಡ್ಡಿ ವಿ. ತಂಗಳ್ (ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಮಾನ್ಯತೆ ನೀಡಲು ಅದರ ಅಧೀನ ಕಾರ್ಮಿಕ ಸಂಘದ ಚುನಾವಣೆ ನಡೆಸಿದ್ದು ನಿಜವೇ,

ಆ) ಈ ಚುನಾವಣೆಯಲ್ಲಿ ಅಧಿಕ ಮತ ಪಡೆದು ಜಯಗಳಿಸಿದ ಕಾರ್ಮಿಕ ಸಂಘ ಯಾವುದು,

ಇ) ಹಾಗಿದ್ದರೆ ಈ ಸಂಘಟನೆಯಿಂದ ಪ್ರತಿನಿಧಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಆಡಳಿತ ಮಂಡಲಿಗೆ ನಾಮಕರಣ ಮಾಡಲಾಗಿದಯೆ,

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು,